
## ಅಂಗೈಯಲ್ಲಿ ಅರಮನೆ

### ನೀವೆಲ್ಲಿ ಇರ್ತೀರಾ?



ತಂಗಿಯ ಮಗಳು ಮನಸ್ವಿಗೆ ಊಟ ಮಾಡಿಸುವಾಗ ಏನಾದರೂ ಮಾತು ಹೇಳುತ್ತಲೇ ಇರಬೇಕು. ಮಾತುಗಳು ನಿಂತರೆ ಊಟ ನಿಲ್ಲಿಸಿ ಬಿಡ್ತಾಳೆ. ಅದಕ್ಕೆ ಅವರಮ್ಮ ಊಟ ಮುಗಿಯುವವರೆಗೂ ಏನಾದ್ರೂ ಬುರುಡೆ ಬಿಡುತ್ತಲೇ ಇರುತ್ತಾಳೆ. ಆವತ್ತು ಕಿಟಕಿಯ ಬಳಿ ಕೂರಿಸಿ ಊಟ ಮಾಡಿಸುತ್ತಿದ್ದಳು. ಪಕ್ಕದ ಖಾಲಿ ಜಾಗದಲ್ಲಿ ಗುಡಿಸಲು ಹಾಕಿಕೊಂಡಿದ್ದ ಕುಟುಂಬದ ಬಗ್ಗೆ ಮಾತು ನಡೆದಿತ್ತು. 'ಅಮ್ಮ ಅವರ ಮನೆ ಯಾಕೆ ವಿಚಿತ್ರವಾಗಿದೆ?' ಅಂದಳು ಮನಸ್ವಿ. 'ಅವರು ಬಡವರು, ಅವರಿಗೆ ಇಷ್ಟು ದೊಡ್ಡ ಮನೆ ಇಲ್ಲ' ಎಂದೆಲ್ಲಾ ವಿವರಿಸಿದಳು. ಮನಸ್ವಿ, 'ಮತ್ತೆ, ನನ್ನ ಮನೆ ಎಲ್ಲಿದೆ?' ಎಂದಳು. 'ಇದೇ ನಿನ್ನ ಮನೆ ಪುಟ್ಟು. ಎಷ್ಟು ದೊಡ್ಡದಿದೆ ಅಲ್ವಾ ನಿನ್ನ ಮನೆ? ಈ ಮನೆಗೆ ನಿನ್ನದೇ ಹೆಸರಿದೆ ತಾನೆ?' ಎಂದಾಗ. 'ಇದು ನನ್ನ ಮನೆನಾ? ಹಾಗಿದ್ರೆ ನೀನು, ಪಪ್ಪ ಎಲ್ಲಿರ್ತೀರಾ?' ಅಂತ ಕೇಳೋದೆ!

**ಸುವರ್ಣಾ ಮಠ**



### ಗಂಡ ಎಷ್ಟಾಯ್ತು?

ನಮ್ಮ ಪಕ್ಕದ ಮನೆಯ ಯುವಕ ಹೊಸದಾಗಿ ಮದುವೆಯಾಗಿ ಹೆಂಡತಿಯನ್ನು ಕರೆತಂದಿದ್ದ. ಮಧ್ಯಾಹ್ನ ಅವರ ಮನೆಗೆ ಬಂದ ಮಲಯಾಳಿ ರಬ್ಬರ್ ಟ್ಯಾಪರ್ ಅವಳಿಗೆ, 'ಗಂಡ ಎಷ್ಟಾಯ್ತಮ್ಮ?' ಎಂದು ಕೇಳಿದ. ಅವಳು ಕೋಪದಿಂದ, 'ಈಗಷ್ಟೆ ಮದ್ವೆಯಾಗಿದೆ, ಗಂಡ ಎಷ್ಟಾಯ್ತು ಅಂತ ಕೇಳ್ತಿಯಲ್ಲ, ನಾಚಿಕೆ ಆಗೊಲ್ಲವೆ ನಿನಗೆ, ರ್‍ಯಾಸ್ಕಲ್' ಎಂದು ಕೋಪದಿಂದ ವಾಚಾಮಗೋಚರವಾಗಿ ಬೈದುಬಿಟ್ಟಳು. ಅಷ್ಟರಲ್ಲಿ ಒಳಗಿನಿಂದ ಅವಳ ಅತ್ತೆ ಬಂದು, 'ಗಲಾಟೆ ಮಾಡಬೇಡಮ್ಮ. ಅವನು ಕನ್ನಡ ಮಾತನಾಡುವುದು ಹಾಗೆಯೇ. ಗಂಟೆ ಎಷ್ಟಾಯ್ತು ಅಂತ ಕೇಳ್ತಿದಾನೆ' ಎಂದು ವಿವರಿಸಿ ಪ್ರಕರಣವನ್ನು ತಿಳಿಗೊಳಿಸಿದರು.

**ಕೃಷ್ಣ ಪಿ.ಎಸ್.**